Anecut across the Shimsha River, Turuvekere Taluk.

Q.—462. **Sri B. HUTCHE GOWDA** (Turuvekere).—

Will the Government be pleased to state :—

(*a*) whether estimates have been prepared for constructing an anecut across the Shimsha River either at Malledevanahally or down below in any place near Guddenahally Village in Turuvekere Taluk to provide water facilities to the villagers of this barren area ;

(*b*) the places in respect of which such estimates are prepared and the estimated amount ; the extent of land that would come under irrigation ;

(*c*) whether they would sanction at least one of the anecuts this year ?

A.—**Sri Kadidal MANJAPPA** (Minister for Revenue and Public works) :—

(*a*) Yes.

(*b*) (i) One, near Malledevanahalli.

(ii) Rs. 1·5 lakhs.

(iii) 700 acres.

(*c*) No sanction is proposed as supply to Marconahalli Reservoir will be adversely affected by the construction of the proposed anecut.

ಶ್ರೀ ಬಿ. ಹುಚ್ಚೇಗೌಡ.—ಮಾರ್ಕೋನಹಳ್ಳಿ ಜಲಾಶಯಕ್ಕೆ ತೊಂದರೆಯಾಗುತ್ತದೆಂದು ಹೇಳಿದ್ದೀರಿ, ಈ ರೀತಿ ಅಲ್ಲಂದೇನಾದರೂ ಮನವಿ ಬಂದಿದೆಯೆ ?

*ಶ್ರೀ ಕಡಿದಾಳ್ ಮಂಜಪ್ಪ.—ನರ್ಕಾರಕ್ಕೇನೂ ಮನವಿ ಬಂದಿಲ್ಲ ; ಇಂಜಿನಿಯರುಗಳು ಆ ರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಈ ಜಲಾಶಯಕ್ಕೆ ಹತ್ತು ಸಾವಿರ ಎಕರೆ ಅಚ್ಚುಕಟ್ಟಿದ್ದು ಪ್ರತಿವರ್ಷವೂ ಕೋಡಿ ಬೀಳುತ್ತಿದ್ದು ಇನ್ನೂ ಹತ್ತು ಸಾವಿರ ಎಕರೆಹೆಚ್ಚು ಮಾಡುವುದಕ್ಕಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಪ್ರತಿವರ್ಷವೂ ಕೋಡಿ ಬೀಳುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಸಾಮಾನ್ಯವಾಗಿ ಕೋಡಿ ಬೀಳುತ್ತದೆ. ಈಗ ನಮಗೆ ಬಂದಿರುವ ವರದಿಯ ಪ್ರಕಾರ, ಈ ಹೊಸ ಯೋಜನೆಯನ್ನು ತೆಗೆದುಕೊಂಡರೆ ಮಾರ್ಕೋನಹಳ್ಳಿ ಜಲಾಶಯದ ಕೆಳಗಿರುವ ರೈತರಿಗೆ ತೊಂದರೆಯಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಅಚ್ಚುಕಟ್ಟು ಪ್ರವಾಹವನ್ನು ತಡೆಯುವುದಿಲ್ಲವಾದ್ದರಿಂದ ತೊಂದರೆಯಾಗುವುದಿಲ್ಲ, ಅಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಂಥಾ ವಿಚಾರಗಳಲ್ಲಿ ತಜ್ಞರ ಅಭಿಪ್ರಾಯದಂತೆ ನಡೆದುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರು ಇಷ್ಟಪಟ್ಟರೆ ಪುನಃ ಪರಿಶೀಲನೆ ಮಾಡಿಸುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—ಇದು ಬೆಂಗಾಡು ಪ್ರದೇಶ. ನಾವು ಕೇಳಿದುದೊಂದನ್ನೂ ಸರ್ಕಾರದವರು ಒಪ್ಪಿ ಮಾಡಿಸಿಲ್ಲ, ಇದನ್ನು ನೋಡಿದರೆ ಆ ತಾಲ್ಲೂಕಿನವರು ಕಾಂಗ್ರೆಸ್ ಸದಸ್ಯರನ್ನು ಚುನಾವಣೆ ಮಾಡದೇಯಿರುವುದೇ ಇದಕ್ಕೆ ಕಾರಣವಲ್ಲವೆ ?

Mr. SPEAKER.—That is an imputation.

ಶ್ರೀ ಬಿ. ಹುಚ್ಚೇಗೌಡ.—ಪ್ರತಿ ತಾಲ್ಲೂಕಿನಲ್ಲಿಯೂ ಕೆಲಸಗಳು ನಡೆಯುತ್ತಿವೆ, ಆದರೆ ಅಲ್ಲಿ ಯಾವ ಕೆಲಸವೂ ನಡೆಯುತ್ತಿಲ್ಲವೆಂದು ರೈತರು ಹೇಳುತ್ತಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಸರ್ಕಾರದವರು ತೆಗೆದುಕೊಂಡ ತೀರ್ಮಾನವಲ್ಲ, ಸ್ಥಳೀಯ ಇಂಜಿನಿಯರಿಂಗ್ ಅಧಿಕಾರಿಗಳು ವ್ಯಕ್ತಪಡಿಸಿರುವ ಅಭಿಪ್ರಾಯದ ಪ್ರಕಾರ ಆಗಿದೆ. ಕಾಂಗ್ರೆಸ್‌ನವರು ಚುನಾಯಿತರಾದ ಕ್ಷೇತ್ರ, ಬೇರೆಯವರು ಚುನಾಯಿತರಾದ ಕ್ಷೇತ್ರ ಎಂದು ಅಧಿಕಾರಿಗಳಿಗೆ ಭೇದಮಾಡುವ ಸ್ವಭಾವವಿಲ್ಲವೆಂದು ಸ್ಪಷ್ಟಪಡಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ.—ಒಂದು ಕೆರೆ ಮಂಜೂರಾಗಿದ್ದುದನ್ನು ಅರ್ಧ ಘಟ್ಟದಲ್ಲೇ ರದ್ದುಮಾಡಿರುವುದು ಗೊತ್ತಿಲ್ಲವೇ ?

Mr. SPEAKER.—You can take up this matter when discussing demands.

ಶ್ರೀ ಬಿ. ಹುಚ್ಚೇಗೌಡ.—ಹಾಗಿದ್ದರೆ ಈ ತಾಲ್ಲೂಕಿನಲ್ಲಿ ಜೀರ್ಣೋದ್ಧಾರ ಮಾಡಬೇಕಾದ ಬೇರೆ ಕೆರೆಗಳು ಯಾವುವೂ ಇಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ಯಾವುದನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಯಾವುದನ್ನು ತೆಗೆದುಕೊಂಡಿದ್ದೀರೆಂದು ನೋಟೀಸ್ ಕೊಟ್ಟರೆ ಹೇಳಬಹುದು.

ಶ್ರೀ ಬಿ. ಹುಚ್ಚೇಗೌಡ.—ಮೂರು ನಾಲ್ಕು ಕೆರೆಗಳನ್ನು ಕೇಳಿದುದಕ್ಕೆ ಒಂದೂ ಆಗುವುದಿಲ್ಲವೆಂದು ಹೇಳಿದ್ದಾರೆ . . . .

Mr. SPEAKER.—The feasibility or otherwise is determined by the Department and not by the Government.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮಾರ್ಕೋನಹಳ್ಳಿ ಜಲಾಶಯದ ನೀರು ಹಿಡಿಯುವ ಶಕ್ತಿಗಿಂತ ಹೆಚ್ಚು ಅಚ್ಚುಕಟ್ಟು develop ಆಗಿದೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಆಗಿದೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಮೊದಲು ನಿರ್ಧಾರಮಾಡಿದ ಅಚ್ಚುಕಟ್ಟಿಗಿಂತ 1,500 ಎಕರೆ ಹೆಚ್ಚಾಗಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಎಚ್. ಹುಚ್ಚೆಮಾಸ್ತಿಗೌಡ.—ಕೆರೆಯ capacityಗಿಂತ ಹೆಚ್ಚು ಆಚ್ಚುಕಟ್ಟು ಮಾಡುವುದು ಸೂಕ್ತವೆ ?

ಅಧ್ಯಕ್ಷರು.—ಅದು ಅಭಿಪ್ರಾಯ.

Revenue Cases.

Q.—104. Sri K. PRABHAKAR (Nelamangala—Scheduled Castes).—

Will the Government be pleased to state :—

(*a*) how many revenue cases have been entertained from 1947 to 1951-52 and again from 1952-53 to 1954-55 ;

(*b*) of them, how many were without lawyer's help and how many were with lawyer's services ;

(*c*) how many were regular ones and how many were review cases ?

A.—Sri Kadidal MANJAPPA (Minister for Revenue and Public Works).—

(*a*) The question is not clear. If the information is wanted in respect of all the revenue cases it is not readily available. If it is in respect of only the revenue appeals before Government it is as follows :—

	No.
1947 to 1951-52 ...	1,323
1952 to 1954-55 ...	1,379

(*b*) and (*c*) Not readily available.

ಶ್ರೀ ಕೆ. ಪ್ರಭಾಕರ್.—ಇದರಲ್ಲಿ 'how many were regular ones, and how many were review cases, ಎಂದು ಕೇಳಿರುವುದಕ್ಕೆ ಗೊತ್ತಾಗುವುದಿಲ್ಲವೆಂದು ಹೇಳಿದೆ, ವಿವರಗಳಿಲ್ಲವೆ ?

Mr. SPEAKER.—Not readily available.

ಶ್ರೀ ಕೆ. ಪ್ರಭಾಕರ್.—ಲಾಯರುಗಳ ಸಹಾಯ ವಿಲ್ಲದೆ ಎಷ್ಟು ಕೇಸುಗಳು ಫೈನಲಾಗಿವೆ ಎಂದು ಕೇಳಿದ್ದಾರೆ, ಹೇಳುವುದಕ್ಕಾಗುವುದಿಲ್ಲವೆಂದು ಹೇಳಿದ್ದೀರಿ, ಕಾರಣವೇನು ?

*ಶ್ರೀ ಕಡಿದಾಳ್ ಮಂಜಪ್ಪ.—ಪ್ರತಿಯೊಂದು ಕೇಸಿನ ರಿಕಾರ್ಡನ್ನೂ ಹುಡುಕಬೇಕು. ಲಾಯರುಗಳು ಬಂದಿದ್ದರೇ ಅಥವಾ ಇಲ್ಲವೆ ಎಂಬುದನ್ನು ಹೇಳುವುದು ಕಷ್ಟ.

ಶ್ರೀ ಜಿ. ಪುಟ್ಟಸ್ವಾಮಿ.—ಹಣವಿಲ್ಲದೇಯಿರುವವರು ಲಾಯರನ್ನಿಟ್ಟುಕೊಳ್ಳುವುದಕ್ಕವಕಾಶವಿಲ್ಲದಿದ್ದರೆ ಅವರಿಗೆ ಏನು ಸಹಾಯ ಮಾಡುತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅಪೀಲಿನಲ್ಲಿ ಖುದ್ದು ವಾದ ಮಾಡುವುದಕ್ಕವಕಾಶವಿದೆ.

ಶ್ರೀ ಜಿ. ಪುಟ್ಟಸ್ವಾಮಿ.—ಅದಕ್ಕೂ ಶಕ್ತಿಯಿಲ್ಲದಿರುವ ನಂದರ್ಭದಲ್ಲಿ ಏನು ರಕ್ಷಣೆ ಕೊಡುತ್ತೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅವರು ತಮಗೆ ತಿಳಿದಿರುವುದನ್ನು ಹೇಳುವುದಕ್ಕವಕಾಶವಿದೆ. ಸಹಾನುಭೂತಿಯಿಂದ ಸರ್ಕಾರದವರು ಕೇಳುತ್ತಾರೆ.

ಶ್ರೀ ಜಿ. ಪುಟ್ಟಸ್ವಾಮಿ.—ಪ್ರತಿ ಕಕ್ಷಿ ಲಾಯರನ್ನಿಟ್ಟಿರುತ್ತಾರೆ. ಲಾಯರು ವಾದಮಾಡುತ್ತಾರೆ. ಆ ನಂದರ್ಭದಲ್ಲಿ ಅವನಿಗೆ ತೊಂದರೆಯಾಗುವುದಿಲ್ಲವೆ ? ಅಂಥ ನಂದರ್ಭದಲ್ಲಿ ಲಾಯರನ್ನು ನೇಮಕ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Mr. SPEAKER.—That need not be answered.

Shuttle Train from Maddur to Mysore.

Q.—585. Sri SHIVANANJE GOWDA (Mysore Taluk).—

Will the Government be pleased to state :—

(*a*) whether it has come to their notice that owing to only four bogies being attached to the Shuttle train that comes from Maddur to Mysore, the students and other public that travel by this train are experiencing much difficulty for want of accommodation ;

(*b*) whether they would recommend to the Central Government to attach two more bogies to this Shuttle train so that there may be at least six bogies and thus solve the difficulty experienced by the students and public for want of accommodation ?

A.—Sri Kadidal MANJAPPA (Minister for Revenue and Public Works).—

(*a*) No.

(*b*) Does not arise in view of reply to (*a*).

ಶ್ರೀ ಶಿವನಂಜೇಗೌಡ.—ಮದ್ದೂರು ಮೈಸೂರು ಷೆಟ್ಲ್‌ನಲ್ಲಿ ನಾಲ್ಕೇ ಬೋಗಿಗಳನ್ನು ಹಾಕುತ್ತಿರುವುದರಿಂದ ಜನರಿಗೂ ವಿದ್ಯಾರ್ಥಿಗಳಿಗೂ ತೊಂದರೆಯಾಗುತ್ತಿದೆಯೆ ಎಂದು ಕೇಳಿರುವುದಕ್ಕೆ ಇಲ್ಲವೆಂದು ಹೇಳಿದ್ದಾರೆ, ಯಾರಿಂದ ಈ ವರ್ತಮಾನ ತರಿಸಿಕೊಂಡರು ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಗಮನಕ್ಕೆ ಇದುವರೆಗೆ ಯಾರೂ ತಂದಿಲ್ಲ.

ಶ್ರೀ ಶಿವನಂಜೇಗೌಡ.—ಇಲ್ಲವೆಂದು ವರ್ತಮಾನ ಯಾರಿಂದ ಬಂತು ?

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ನಮಗೆ ಯಾರೂ ತಿಳಿಸಲಿಲ್ಲ.